**ದಿಃ19.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ಕನ್ನಡ ಬರದ ಕಾರಣ ಹಾಗೂ ತುಳು ಬರುವ ಕಾರಣ ವಕೀಲರಾದ ಶ್ರೀಮತಿ ಕೆ ಜಿ ರವರನ್ನು ಭಾಷಾಂತರಕಾರರಾಗಿ ನೇಮಕ ಮಾಡಿ ಪ್ರಮಾಣ ವಚನ ಬೋಧಿಸಲಾಗಿರುತ್ತದೆ.

ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ಹೂವ ಸಪಲ್ಯ ನನ್ನ ಅಜ್ಜ ಎಂದರೆ ನಿಜ. ತೋಮು ಸಪಲ್ತಿ ನನ್ನ ಅಜ್ಜಿ ಎಂದರೆ ನಿಜ. ಅಂತಪ್ಪ ಸಪಲ್ಯ ಇವರ ಹೆಂಡತಿಯ ಹೆಸರು ಏನು ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ. ಲಕ್ಷ್ಮೀ ಹಾಗೂ ಅಂತ ಸಪಲ್ಯ ಇವರಿಗೆ ತಿಮ್ಮಪ್ಪ ಎಂಬ ಮಗ ಇದ್ದ ಎಂದರೆ ಸಾಕ್ಷಿ ಅಂತಪ್ಪ ಸಪಲ್ಯ ಇವರಿಗೆ ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಕೊರಗ ಸಪಲ್ಯ ಇವರಿಗೆ ಬಾಗಿ ಎಂಬ ಹೆಂಡತಿ ಇದ್ದರು ಎಂದರೆ ಸಾಕ್ಷಿ ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಕೋಟಿ ಸಪಲ್ಯ ಇವರ ಗಂಡನ ಹೆಸರು ಕೋಟಿ ಸಪಲ್ಯ ಎಂದರೆ ನಿಜ. ಕೋಟಿ ಸಪಲ್ಯ ಮತ್ತು ಕೋಟಿ ಸಪಲ್ಯ ಇವರಿಗೆ ರುಕ್ಮಿಣಿ, ಅಪ್ಪಿ ಯಾನೆ ದೇಯಕ್ಕು, ಕಾಂತಪ್ಪ, ಲಕ್ಷ್ಮಣ ಹಾಗೂ ಪಾರ್ವತಿ ಎಂಬ ಮಕ್ಕಳು ಎಂದರೆ ನಿಜ. ರುಕ್ಮಿಣಿ ಇವರ ಗಂಡನ ಹೆಸರು ಬಾಬು ಎಂದರೆ ಸಾಕ್ಷಿ ಎಂದರೆ ನನಗೆ ಗೊತ್ತಿಲ್ಲ. ಸದರಿ ರುಕ್ಮಿಣಿ ಹಾಗೂ ಮೃತಪಟ್ಟಿರುತ್ತಾರೆ ಎಂದರೆ ನಿಜ. ಸದರಿಯವರಿಗೆ ಅಣ್ಣು, ಸೇಸಪ್ಪ, ಚೆನ್ನಪ್ಪ, ಪೂವಕ್ಕ, ದೇಯಮ್ಮ, ಮಂಜಪ್ಪ, ಸದಾನಂದ ಯಾನೆ ಬೋಜ ಎಂಬ ಮಕ್ಕಳು ಇದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಣ್ಣು ದಾವಾ ಜಮೀನಿನ ಹತ್ತಿರ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸುಳ್ಳು. ಅದೇ ರೀತಿ ಸೇಸಮ್ಮ ಸಹ ದಾವಾ ಆಸ್ತಿ ಬಳಿ ವಾಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಇದ್ದರು ಈಗ ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ಚೆನ್ನಪ್ಪ ಲೋಕೋಪಯೋಗಿ ಇಲಾಖೆಯಲ್ಲಿಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ದೇಯಮ್ಮ ಸರಕಾರಿ ಶಾಲೆಯಲ್ಲಿ ಶಿಕ್ಷಕರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗುಂಡಿ ಸಪಲ್ತಿ ರವರ ಗಂಡ ನೀಲಯ್ಯ ಎಂದರೆ ಸಾಕ್ಷಿ ಅವರಿಗೆ ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯ ಹೆಸರು ಐತಪ್ಪ ಸಪಲ್ಯ ಎಂದರೆ ನಿಜ. ನನ್ನ ಹಿರಿಯರು ವೆಂಕಪ್ಪ ಅರಸರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸುಳ್ಳು. ವೆಂಕಪ್ಪ ಅರಸರ ಮನೆಯ ಒಕ್ಕಲಿನಲ್ಲಿ ನಮ್ಮ ಕುಟುಂಬಸ್ಥರು ಕೆಲಸ ಮಾಡಿಕೊಂಡಿದ್ದರು ಎಂದರೆ ಸುಳ್ಳು. ಅದೇ ರೀತಿ ನನ್ನ ತಾಯಿ ಸದರಿಯವರ ಮನೆಯಲ್ಲಿ ಮನೆ ಕೆಲಸ ಮಾಡುತ್ತಿದ್ದರು ಎಂದರೆ ಸುಳ್ಳು. ವೆಂಕಪ್ಪ ಅರಸರಿಗೆ ನನ್ನ ತಾಯಿ ಮತ್ತು ಹಿರಿಯರ ಕುರಿತು ಸರಿಯಾದ ಅಭಿಪ್ರಾಯ ಇಲ್ಲದ

ಕಾರಣ ಅವರನ್ನು ಕೆಲಸದಿಂದ ಬಿಡಿಸಿರುತ್ತಾರೆ ಎಂದರೆ ಸುಳ್ಳು. ನಂತರ ನಾನು ತನಿಯಪ್ಪ ಸೇರಿಗಾರ್ ಎಂಬುವವರ ಮನೆಯಲ್ಲಿ ಬಾಡಿಗೆಗೆ ಇದ್ದೆವು ಎಂದರೆ ಸಾಕ್ಷಿ ಸದರಿಯವರು ಸೇರಿಗಾರರ ಮನೆಯಲ್ಲಿ ಇದ್ದದ್ದು ಹೌದು ಬಾಡಿಗೆಗೆ ಅಲ್ಲ ಎಂದು ನುಡಿಯುತ್ತಾರೆ. ತನಿಯಪ್ಪ ಸೇರಿಗಾರರ ಜೊತೆ ಜಗಳ ಆದ ಕಾರಣ ನಮ್ಮನ್ನು ಮನೆಯಿಂದ ಹೊರಗೆ ಹಾಕಿದ್ದರು ಎಂದರೆ ಸುಳ್ಳು. ಸದಾನಂದ ಪುಂಜಾ ರವರು ಗುರುಮಂದಿರದ ಬಳಿ ನಮಗೆ ಸರಕಾರಿ ಜಾಗ ಮಾಡಿಕೊಟ್ಟರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ನನ್ನ ಮನೆ ಇರುವುದು ಗುರುಮಂದಿರದ ಹತ್ತಿರ ಎಂದರೆ ನಿಜ. ಸದರಿ ಮನೆಯಲ್ಲಿ ನಾನು ಎಷ್ಟು ಕಾಲದಿಂದ ಇದ್ದೇನೆ ಎಂದರೆ ಸಾಕ್ಷಿ **10** ರಿಂದ **20** ವರ್ಷ ಎಂದು ನುಡಿಯುತ್ತಾರೆ. **1961**ನೇ ಇಸವಿಯಿಂದ ಸದರಿ ಮನೆಯಲ್ಲಿ ಇದ್ದೇನೆ ಎಂದರೆ ಸುಳ್ಳು.

ದಾವಾ ಜಮೀನಿನ ಪಹಣಿ ಪತ್ರಿಕೆ ನೋಡಿದರೆ ಹೇಳಬಹುದೇ ಎಂದರೆ ಸಾಕ್ಷಿ ತನಗೆ ಓದು ಬರಹ ಇಲ್ಲ ಎಂದು ನುಡಿಯುತ್ತಾರೆ.

ಲಕ್ಷ್ಮೀ ಸಪಲ್ಯ ಇವರಿಗೆ ಓದು ಬರಹ ಬರುವುದಿಲ್ಲ ಎಂದರೆ ನಿಜ. ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆ ಹಾಜರುಮಾಡಿದ್ದೇನಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಕೆಲವು ಜಾಗ ಸರಕಾರಿ ರಸ್ತೆ ನಿರ್ಮಾಣಕ್ಕೆ ಹೋಗಿದೆಯಾ ಎಂದರೆ ಸಾಕ್ಷಿ ಹೋಗಿದೆಯಾ ಎಂದು ಪುನಃ ಪ್ರಶ್ನೆ ಕೇಳುತ್ತಾರೆ. ಅದೇ ರೀತಿ ದಾವಾ ಆಸ್ತಿಗಳಲ್ಲಿ ಕೆಲವು ಭಾಗ ಏತ ನೀರಾವರಿ ಯೋಜನೆಗೆ ಹೋಗೀರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಏತ ನೀರಾವರಿ ಯೋಜನೆಗೆ ಹೋದ ಜಾಗದ ಪರಿಹಾರ ಲಕ್ಷ್ಮೀ ಸಪಲ್ಯ ಇವರಿಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಾಖಲೆಗಳನ್ನು ಯಾವ ಕಾರಣಕ್ಕೆ ಹಾಜರುಮಾಡಿದ್ದೇನೆ ಎಂದರೆ ಸಾಕ್ಷಿ ತನ್ನ ಅಜ್ಜನ ಪಾಲು ಸಿಕ್ಕರೆ ಸಾಕು ಎಂಬ ಕಾರಣಕ್ಕೆ ಹಾಜರುಮಾಡಿರುವುದಾಗಿ ನುಡಿಯುತ್ತಾರೆ. ನಾನು ಹಾಜರುಮಾಡಿರುವ ದಾಖಲೆ ಏನು ಎಂದು ಹೇಳಬಹುದಾ ಎಂದರೆ ಸಾಕ್ಷಿ ಏನು ಹೇಳಬೇಕು ಎಂದು ನುಡಿಯುತ್ತಾರೆ. ನಾನು ಯಾವ ಕಾರಣಕ್ಕೆ ದಾಖಲೆ ಹಾಜರುಮಾಡಿದ್ದೇನೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ಜಾಗ ಸಿಕ್ಕರೆ ಸಾಕು ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**